ಹೊಸ ದಿಗಂತ
ಶುಕ್ರವಾರ
21 ನವೆಂಬರ್ 2025

# ಪ್ರಗತಿಪರ ಯುವ ರೈತ ಪ್ರಶಸ್ತಿ ಪ್ರದಾನ

**ಆನೇಕಲ್:** ತಾಲೂಕಿನ ಗೆರಟಿಗನಬೆಲೆ ಗ್ರಾಮದ ಸುಮಾರು ಆರು ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ವಿವಿಧ ರೀತಿಯ ಮಿಶ್ರ ಬೆಳೆಯನ್ನು ಬೆಳೆದು ಕೃಷಿ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ ಗುರುತಿಸಿ ಕೃಷಿ ವಿಶ್ವ ವಿದ್ಯಾಲಯ ಕೃಷಿ ಮೇಳದಲ್ಲಿ ಯುವ ರೈತ ಪೃಥ್ವಿರಾಜ್ ರವರಿಗೆ ಕೃಷಿ ಇಲಾಖೆಯಿಂದ ತಾಲೂಕು ಮಟ್ಟದ ಪ್ರಗತಿಪರ ಯುವ ರೈತ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಹೆಸರುಘಟ್ಟ ಬಳಿಯ EHXH ಕೃಷಿ ಮೇಳದಲ್ಲಿ ಪೃಥ್ವಿರಾಜ್ ಅವರಿಗೆ ಕೃಷಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆ ವತಿ ಯಿಂದ ತಾಲೂಕುಮಟ್ಟದ ಪ್ರಗತಿ ಪರ ಯುವ ರೈತ ಪ್ರಶಸ್ತಿ ಪಡೆದ ಪೃಥ್ವಿರಾಜ್ ಮಾತನಾಡಿ, ತಮ್ಮ ಜಮೀನುನಲ್ಲಿ ಕೃಷಿಯ ಜತೆ ಜತೆಗೆ ಹೈನುಗಾರಿಕೆ, ಮೀನು ಗಾರಿಕೆ, ಕುರಿ ನಾಟಿ ಕೋಳಿ ಸಾಕಾಣಿಕೆ ಹಾಗೂ ಮಿಶ್ರ ಬೆಳೆಗಳು ಸೇರಿದಂತೆ ಸಮಗ್ರ ಕೃಷಿ ಮೂಲಕ ಅತ್ಯುತ್ತಮ ಆದಾಯಗಳಿಸಬಹುದು ಎಂದರು.

ಇನ್ನು ಇತ್ತೀಚಿಗೆ ಸಮಗ್ರ ಕೃಷಿ ಅಳವಡಿಕೆ ಮಾಡಿಕೊಂಡರೆ ರೈತರು ಉತ್ತಮ ಆದಾಯವನ್ನು ನಿರೀಕ್ಷಿಸಬಹುದಾಗಿದೆ, ಈ ನಿಟ್ಟಿನಲ್ಲಿ ಎಲ್ಲಾ ರೈತ ಬಾಂಧವರು ವಿಭಿನ್ನವಾಗಿ ಯೋಚಿಸಿ ಅತ್ಯುತ್ತಮ ಲಾಭ ಪಡೆಯಬಹುದಾಗಿದೆ ಎಂದು ತಮ್ಮ



ಅಭಿಪ್ರಾಯ ಹಂಚಿಕೊಂಡರು. ಜತೆಗೆ ತಮಗೆ ಪ್ರಶಸ್ತಿ ನೀಡಿದ ಕೃಷಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಅವರು ಧನ್ಯವಾದ ಸಲ್ಲಿಸಿದರು.

# ಜಿಕೆವಿಕೇಲಿ ರಾಷ್ಟ್ರೀಯ ವಿಚಾರ ಸಂಕಿರಣ




ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿದ್ದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣದಲ್ಲಿ ಕೇಂದ್ರ ರೇಷ್ಮೆ ಮಂಡಳಿ ತಾಂತ್ರಿಕ ವಿಭಾಗದ ಜಂಟಿ ಕಾರ್ಯದರ್ಶಿ ಡಾ.ಎನ್.ಸುರೇಶ್ ಬಾಬು, ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ ಪಾಲ್ಗೊಂಡಿದ್ದರು.

Kannadaprabha pg 04

# ನುಸಿ ತಡೆಗೆ ಪರಿಸರ ಸ್ನೇಹಿ ತಂತ್ರಜ್ಞಾನ ಬಳಸಿ: ಸುರೇಶ್

## ಕೃಷಿ ವಿವಿಯಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ

- ನುಸಿಗಳಿಂದಿ ವರ್ಷದಿಂದ ವರ್ಷಕ್ಕೆ ಬೆಳೆಹಾನಿ ಹೆಚ್ಚಳ
- ಈಚೆಗೆ ಮೆಣಸಿನಕಾಯಿ ಟೊಮೆಟೊ, ತೆಂಗು, ಅಡಿಕೆ, ಗುಲಾಬಿ ಹೂವು ಮತ್ತಿತರ ಬೆಳೆಗಳಲ್ಲಿ ನುಸಿಬಾಧೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೃಷಿಯಲ್ಲಿ ನುಸಿಗಳಿಂದ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ಬೆಳೆಹಾನಿ ತಡೆಯಲು ಪರಿಸರಸ್ನೇಹಿ ತಂತ್ರಜ್ಞಾನಗಳನ್ನು ಬಳಸಬೇಕು ಎಂದು ಕೇಂದ್ರ ರೇಷ್ಮೆ ಮಂಡಳಿ ತಾಂತ್ರಿಕ ವಿಭಾಗದ ಜಂಟಿ ಕಾರ್ಯದರ್ಶಿ ಡಾ.ಎನ್.ಸುರೇಶ್ ಬಾಬು ಸಲಹೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಹೆಬ್ಬಾಳದ ಜಿಕೆವಿಕೆಯಲ್ಲಿ ಗುರುವಾರ ಆಯೋಜಿಸಿದ್ದ 'ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಕೃಷಿಯಲ್ಲಿ ನುಸಿಗಳ ಸವಾಲು ಮತ್ತು ಸುಸ್ಥಿರ ನಿರ್ವಹಣೆ' ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮೆಣಸಿನ ಕಾಯಿ, ದೊಣ್ಣ ಮೆಣಸಿನಕಾಯಿ, ಟೊಮೆಟೊ, ತೆಂಗು, ಅಡಿಕೆ, ಗುಲಾಬಿ ಹೂವು ಮತ್ತಿತರ ಬೆಳೆಗಳು ನುಸಿಗಳಿಂದ ಹಾನಿ ಆಗುತ್ತಿವೆ. ಹಾಗಾಗಿ ಪರಿಸರಸ್ನೇಹಿ ತಂತ್ರಜ್ಞಾನಗಳನ್ನು ಬಳಸಿ ನುಸಿ ಬಾಧೆಯನ್ನು ತಡೆಗಟ್ಟಲು ಬೆಳೆಗಾರರು ಕಾರ್ಯೋನ್ಮುಖವಾಗಬೇಕು ಎಂದರು.

ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ ಮಾತನಾಡಿ, 'ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿಯಲ್ಲಿ ಸಣ್ಣ ಗಾತ್ರದ ನುಸಿಗಳು ಅಧಿಕ ಹಾನಿ ಉಂಟು ಮಾಡುತ್ತಿವೆ. ನಮ್ಮ ವಿವಿ ಸೇರಿದಂತೆ ದೇಶದ ವಿವಿಧ ಸಂಘ ಸಂಸ್ಥೆಗಳು ನುಸಿಗಳ ಕುರಿತು ಸಂಶೋಧನಾ ಕಾರ್ಯಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವುದು ಅನಿವಾರ್ಯ ಎಂದರು. ದೆಹಲಿಯ ಭಾರತೀಯ ಕೃಷಿ ಸಂಶೋಧನಾ ಪರಿಷತ್ ಮಾಜಿ ವಿಜ್ಞಾನಿ ಡಾ.ಕೆ.ಕೃಷ್ಣಕುಮಾರ್, ಕೃಷಿ ವಿವಿ ಸಂಶೋಧನಾ ನಿರ್ದೇಶಕ ಡಾ. ಶಿವರಾಮು ಉಪಸ್ಥಿತರಿದ್ದರು.

Kannadaprabha pg 04

# ಡಿ.6, 7ರಂದು ಗ್ಲೋಬಲ್ ಯೋಗ ಸಮ್ಮಿಟ್-2025

## ಜಿಕೆವಿಕೆ ಆವರಣದಲ್ಲಿ ಸಮ್ಮೇಳನ: ನಾಗೇಂದ್ರ ಪ್ರಸಾದ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಾಲ್ಕು ಸಾವಿರ ಯೋಗ ವೃತ್ತಿಪರರನ್ನು ಸಿದ್ಧಪಡಿಸುವ ಉದ್ದೇಶದಿಂದ ಡಿ.6-7ರಂದು ಬೆಂಗಳೂರಿನಲ್ಲಿ ನಾಲ್ಕನೇ ವಿಶ್ವ ಆಹಾರ ಆರೋಗ್ಯ ಎಕ್ಸ್‌ಪೋ ಮತ್ತು ಗ್ಲೋಬಲ್ ಯೋಗ ಸಮ್ಮೇಳನ(ಜಿವೈಎಸ್) ಆಯೋಜಿಸಲಾಗಿದೆ.




ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಜಿವೈಎಸ್ ಅಧ್ಯಕ್ಷ ಬಿ.ಎಲ್.ನಾಗೇಂದ್ರ ಪ್ರಸಾದ್, 'ಮಾನಸಿಕ ಆರೋಗ್ಯಕ್ಕಾಗಿ ಯೋಗ' ಘೋಷ ವಾಕ್ಯದಡಿಯಲ್ಲಿ ಗ್ಲೋಬಲ್ ಯೋಗ ಸಮ್ಮಿಟ್ 2025 ಆಯೋಜಿಸಲಾಗುತ್ತಿದೆ. ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಆಯುಷ್ ಇಲಾಖೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿ, ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಸಮ್ಮೇಳನ ನಡೆಯಲಿದೆ ಎಂದು ಹೇಳಿದರು.

ನಗರದ ಜಿಕೆವಿಕೆ ಆವರಣದಲ್ಲಿರುವ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಕನ್ವೆನ್ಷನ್ ಸೆಂಟರ್‌ನಲ್ಲಿ ಡಿ.6ರಂದು ಸಮ್ಮೇಳನದ ಉದ್ಘಾಟನೆ ನಡೆಯಲಿದ್ದು ಕಾಗಿನೆಲೆ ಪೀಠದ ಡಾ.ನಿರಂಜನಾನಂದಪುರಿ ಸ್ವಾಮೀಜಿ, ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಅವಧೂತ ವಿನಯ್ ಗುರೂಜಿ, ಡಾ.ಅರಳು ಮಲ್ಲಿಗೆ ಪಾರ್ಥಸಾರಥಿ ಗುರೂಜಿ, ಸಚಿವರಾದ ಡಾ.ದಿನೇಶ್ ಗುಂಡೂರಾವ್, ಕೆ.ಎಚ್.ಮುನಿಯಪ್ಪ, ಕೃಷ್ಣಬೈರೇಗೌಡ, ಮಂತ್ರಾಲಯದ ಸುಬುಧೇಂದ್ರ ಸ್ವಾಮೀಜಿ ಸೇರಿದಂತೆ ಇತರರು ಪಾಲ್ಗೊಳ್ಳುವರು ಎಂದರು.

ನಾಲ್ಕರಿಂದ ಐದು ಸಾವಿರ ಯೋಗ ವೃತ್ತಿಪರರನ್ನು ಸಿದ್ಧಪಡಿಸುವುದು ಜಿವೈಎಸ್ 2025 ಮುಖ್ಯ ಉದ್ದೇಶ. ಸುಮಾರು ಐದು ಸಾವಿರ ಯೋಗ ಶಿಕ್ಷಕರು, ಥೆರಪಿಸ್ಟ್ ಮತ್ತು ವೇದಿಕ್ ಕೌನ್ಸಿಲರ್ ಉದ್ಯೋಗಗಳನ್ನು ರಾಜ್ಯಾದ್ಯಂತ ಹುಟ್ಟು ಹಾಕುವ ಗುರಿ ಹೊಂದಲಾಗಿದೆ. ಸಮ್ಮೇಳನದಲ್ಲಿ ಭಾಗವಹಿಸುವವರಿಗೆ ಉಚಿತ ಸಮಾಲೋಚನೆ ಒದಗಿಸಲಾಗುವುದು. ತಜ್ಞರೊಂದಿಗೆ ನ್ಯೂಮೆರಾಲಜಿ, ಔಷಧ ರಹಿತ ಥೆರಪಿಗಳು, ರೇಖಿ, ಅಕ್ಯುಪಂಚರ್, ಅಕ್ಯುಪ್ರೇಶರ್, ಕಲರ್ ಥೆರಪಿ, ಫೇಸ್ ರೀಡಿಂಗ್, ಮೆಡಿಕಲ್ ನ್ಯುಮರಾಲಜಿ, ಕೈಬರಹ ವಿಶ್ಲೇಷಣೆ, ಕಪ್ಪಿಂಗ್ ಥೆರಪಿ, ಸಾಮೂಹಿಕ ಅಗ್ನಿಹೋತ್ರ ಮತ್ತು ಧ್ಯಾನವನ್ನು ಇತರರೊಂದಿಗೆ ನಡೆಸಬಹುದಾಗಿದೆ ಎಂದು ಹೇಳಿದರು.